**ದಿನಾಂಕಃ 13.11.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು:- ಪ್ರತಿವಾದಿ ಪರ ಶ್ರೀ ಎಸ್.ಬಿ.ಡಿ. ವಕೀಲರಿಂದಃ**

1) ದಿಃ- 22.12.2018 ರಂದು ನನ್ನ ಮತ್ತು ಪ್ರತಿವಾದಿಯ ನಡುವೆ ಕ್ರಯ ಕರಾರು ಆಗಿರುತ್ತದೆ ಎಂದರೆ ಸರಿ. ಸದರಿ ದಾಖಲೆಯನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿರುತ್ತೇನೆ. ಆ ರೀತಿ ದಾಖಲೆಯನ್ನು ಹಾಜರುಪಡಿಸಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಾಖಲೆಯನ್ನು ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಸರಿಯಲ್ಲ.

2) ನಿಪಿ.4 ಕ್ರಯ ಪತ್ರದ ಮೂಲ ಪ್ರತಿಯು ನನ್ನ ಬಳಿ ಇರುತ್ತದೆ. ಸದರಿ ದಾಖಲೆಯನ್ನು ವಕೀಲರಿಗೆ ನೀಡಿರುತ್ತೇನೆ. ನಿಪಿ.4 ರಲ್ಲಿ ತಿಳಿಸಿದಂತ ಒಟ್ಟು ಮೊಗಲಗಿನ ನಿಷ್ಕರ್ಶೆಯು ನನ್ನ ಮತ್ತು ಪ್ರತಿವಾದಿ ನಡುವೆ ನಮ್ಮ ಮನೆಯಲ್ಲಿ ಆಗಿರುತ್ತದೆ. ನಿಪಿ.4 ರಲ್ಲಿ ತಿಳಿಸಿದಂತೆ 5 ಲಕ್ಷ ಹಣವನ್ನು ಚೆಕ್ ಮೂಲಕ ನೀಡಲು ತೊಂದರೆ ಇತ್ತೇ ಎಂದರೆ ಸಾಕ್ಷಿಯು ಪ್ರತಿವಾದಿ ನಗದು ರೂಪದಲ್ಲಿ ಕೇಳಿದ ಕಾರಣ ನಗದು ಹಣ ನೀಡಿರುವುದಾಗಿ ನುಡಿಯುತ್ತಾರೆ. ಅದರಲ್ಲಿ ತಿಳಿಸಿದ ರೂ.20,31,000/- ಹಣವನ್ನು ಹಂತಹಂತವಾಗಿ ಪ್ರತಿವಾದಿ, ಆಕೆಯ ಗಂಡ, ಅವರ ಅಳಿಯ ಮತ್ತು ಮಗಳ ಸಮಕ್ಷಮ ನೀಡಿರುತ್ತೇನೆ. ಆ ರೀತಿ ಹಣ ನೀಡಿದ್ದಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ.4 ರಲ್ಲಿ ಸಾಕ್ಷಿದಾರರ ಸಹಿ ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ.4 ರ ದಾಖಲೆಯ ವ್ಯವಹಾರವನ್ನು ಹೊರತುಪಡಿಸಿ ನನ್ನ ಮತ್ತು ಪ್ರತಿವಾದಿಯ ನಡುವೆ ಉಪನೊಂದಣಾಧಿಕಾರಿ ಕಛೇರಿಯಲ್ಲಿ ಯಾವುದೇ ರೀತಿ ನೊಂದಾಯಿತ ದಾಖಲೆ ಅಥವಾ ಇನ್ನಿತರ ದಾಖಲೆಯ ಮೂಲಕ ಯಾವುದೇ ವ್ಯವಹಾರ ಆಗಿರುವುದಿಲ್ಲ. ಸಾಕ್ಷಿಯ ಮುಂದುವರೆದು ಪ್ರತಿವಾದಿಗೆ ಸೇರಿದ ಒಂದು ನಿವೇಶನವನ್ನು ತಾನು ಖರೀದಿ

ಮಾಡಿರುವುದಾಗಿ ನುಡಿಯುತ್ತಾರೆ. ದಾವಾ ಸ್ವತ್ತಿನ ಮನೆ ಮತ್ತು ಆ ಮನೆಗೆ ಹೊಂದಿಕೊಂಡಂತೆ ಇರುವ ಖಾಲಿ ನಿವೇಶನ ಎರಡನ್ನೂ ಸಹ ಖರೀದಿ ಮಾಡಿರುತ್ತೇನೆ ಎಂದರೆ ಸರಿ. ಸದರಿ ಎರಡೂ ಪತ್ರಗಳನ್ನೂ ಒಂದೇ ದಿನಾಂಕದಂದು ನೊಂದಣಿ ಮಾಡಲಾಗಿದೆ ಎಂದರೆ ಸಾಕ್ಷಿಯು ಬೇರೆ ಬೇರೆ ದಿನಾಂಕಗಳಂದು ಮಾಡಿರುವುದಾಗಿ ನುಡಿಯುತ್ತಾರೆ. ನಾನು ಹೇಳಿದಂತೆ ಪ್ರತಿವಾದಿ ಮತ್ತು ಆಕೆಯ ಕುಟುಂಬದವರು ನನ್ನ ಜೊತೆ ದಾವಾ ಸ್ವತ್ತು ಮತ್ತು ಖಾಲಿ ನಿವೇಶನದ ಸಂಬಂಧ ಯಾವುದೇ ರೀತಿಯ ವ್ಯವಹಾರ ಮಾಡಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ಮತ್ತು ಆಕೆಯ ಕುಟುಂದಬವರಿಗೆ ಸಾಲ ಕೊಡಿಸುವುದಾಗಿ ನಂಬಿಸಿ ಅವರಿಂದ ದಾವಾ ಮನೆ ಮತ್ತು ಅದಕ್ಕೆ ಹೊಂದಿಕೊಂಡ ಖಾಲಿ ನಿವೇಶನಕ್ಕೆ ಸೇರಿದಂತೆ ಅವರಿಂದ ಸುಳ್ಳು ಕ್ರಯ ಪತ್ರಗಳನ್ನು ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆ ರೀತಿ ನಾನು ಮೋಸ ಮಾಡಿ ಪತ್ರ ಮಾಡಿಕೊಂಡ ಕಾರಣ ಸದರಿ ವಿಚಾರ ತಿಳಿದು ಪ್ರತಿವಾದಿಯ ಗಂಡ ಮೃತಪಟ್ಟರು ಎಂದರೆ ಸರಿಯಲ್ಲ.

3) ಪ್ರತಿವಾದಿಯು ದಾವಾ ಮನೆಯನ್ನು ಖಾಲಿ ಮಾಡದಿದ್ದಲ್ಲಿ ಕೊಲೆ ಮಾಡುವುದಾಗಿ ಬೆದರಿಕೆ ಹಾಕಿ ಆಕೆಗೆ ಅವಾಚ್ಯ ಶಬ್ದಗಳಿಂದ ನಿಂದನೆಯನ್ನೂ ಸಹ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿ ಮತ್ತು ಆಕೆಯ ಕುಟುಂಬದವರಿಗೆ ನಾನು ಮೋಸ ಮಾಡಿ ನೊಂದಾಯಿತ ಕ್ರಯ ಪತ್ರಗಳನ್ನು ಮಾಡಿಕೊಂಡಿರುವ ಕಾರಣ ಹಾಗೂ ಅವರಿಗೆ ತೊಂದರೆ ನೀಡಿದ ಕಾರಣ ಅವರು ನನ್ನ ವಿರುದ್ಧ ಪೊಲೀಸ್ ಠಾಣೆಗೆ ದೂರು ದಾಖಲಿಸಿರುತ್ತಾರೆ ಎಂದರೆ ಸಾಕ್ಷಿಯು ತಾನು ಮನೆಯನ್ನು ಖಾಲಿ ಮಾಡಿ ಎಂದು ಕೇಳಿದ ಕಾರಣ ಮಾತ್ರವೇ ತನ್ನ ವಿರುದ್ಧ ಸುಳ್ಳು ದೂರು ದಾಖಲಿಸಿದ್ದಾಗಿ ನುಡಿಯುತ್ತಾರೆ. ದಾವಾ ಮನೆ ಮತ್ತು ಅದಕ್ಕೆ ಹೊಂದಿಕೊಂಡಂತೆ ಇರುವ ಖಾಲಿ ನಿವೇಶನವನ್ನು ಮಾರಾಟ ಮಾಡುವ ಯಾವುದೇ ಉದ್ದೇಶ ಪ್ರತಿವಾದಿ ಮತ್ತು ಆಕೆಯ ಕುಟುಂದಬವರಿಗೆ ಇರಲಿಲ್ಲ ಎಂದರೆ ಸರಿಯಲ್ಲ. ಆ ರೀತಿ ಮಾರಾಟ ಮಾಡುವ ಯಾವುದೇ ಪ್ರಸ್ತಾಪವನ್ನು ಪ್ರತಿವಾದಿ ನನ್ನ ಬಳಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಕ್ರಯಪತ್ರಗಳಲ್ಲಿ ತಿಳಿಸಿದಂತಹ ಯಾವುದೇ ಪ್ರತಿಫಲವನ್ನು ಪ್ರತಿವಾದಿ ಮತ್ತು ಆಕೆಯ ಕುಟುಂದಬವರಿಗೆ ನೀಡಿರುವುದಿಲ್ಲ ಆದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವಾ ಮನೆ ಮತ್ತು ಅದಕ್ಕೆ ಹೊಂದಿಕೊಂಡ ಖಾಲಿ ನಿವೇಶನವನ್ನು ಕಬಳಿಸುವ ಸಲುವಾಗಿ ಸುಳ್ಳು ಕ್ರಯ ಪತ್ರಗಳನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ದಾವೆಯಲ್ಲಿ ಕೋರಿದಂತೆ ಯಾವುದೇ ಪರಿಹಾರವನ್ನು ಪಡೆಯಲು ನನಗೆ ಹಕ್ಕು ಮತ್ತು ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಮನೆ ಮತ್ತು ಅದಕ್ಕೆ ಹೊಂದಿಕೊಂಡಂತೆ ಇರುವ ಖಾಲಿ ನಿವೇಶನಕ್ಕೆ ಸೇರಿದಂತೆ ಆಯಿತು ಎನ್ನಲಾದ ಕ್ರಯಪತ್ರಗಳಿಗೂ ಹಾಗೂ ಕ್ರಯ ಕರಾರು ಪತ್ರಗಳಿಗೂ ಮತ್ತು ನನಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಕಬಳಿಸುವ ಸಲುವಾಗಿ ನಿಪಿ.1 ರಿಂದ 7 ರ ದಾಖಲೆಗಳನ್ನು ಸೃಷ್ಟಿ ಮಾಡಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ದಾವಾ ಸ್ವತ್ತನ್ನು ಹೊರತುಪಡಿಸಿ ವಾಸಿಸಲು ಬೇರೆ ಯಾವುದೇ ಮನೆ ಇಲ್ಲ ಎಂದು ತಿಳಿದಿದ್ದರೂ ಸಹ ದಾವಾ ಸ್ವತ್ತನ್ನು ಲಪಟಾಯಿಸಲು ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:- ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು).

ಓ. ಹೆ. ಕೇ. ಸರಿ ಇದೆ.

**ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ**
**ನ್ಯಾಯಾಲಯ, ಚನ್ನಪಟ್ಟಣ.**